ಸಂಪಾದಕ ಮಂಡಳಿ

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

# ವೇದವೇದಾಂಗಗಳೆಂದರೇನು?

**-ಆತ್ಮಾರಾಮ ಶಾಸ್ತ್ರೀ, ಬೆಂಗಳೂರು**

ಜಗತ್ತಿನಲ್ಲಿ ಅನೇಕ ಧರ್ಮಗಳಿವೆ. ಆ ಧರ್ಮಗಳಿಗೆಲ್ಲ ಪವಿತ್ರ ಗ್ರಂಥಗಳೂ ಇವೆ. ನಮ್ಮ ಧರ್ಮ ಸನಾತನ ಧರ್ಮ. ಇದಕ್ಕೂ ಪವಿತ್ರ ಗ್ರಂಥಗಳಿವೆ. ಈ ಪವಿತ್ರ ಗ್ರಂಥಗಳ ಹೆಸರು ವೇದಗಳೆಂದು.

ವೇದವೆಂಬ ಶಬ್ದ 'ವಿದ' ತಿಳಿಯುವುದು ಎಂಬರ್ಥದ ಧಾತುವಿನಿಂದ ಬಂದಿದೆ. ಯಾವ ಗ್ರಂಥದಿಂದ ಅಲೌಕಿಕ ವಿಷಯಗಳ ತಿಳುವಳಿಕೆ ಉಂಟಾಗುತ್ತದೋ ಅದೇ 'ವೇದ' ಎಂದು ಅರಿಯಬೇಕು. ಲೌಕಿಕ ವಿಷಯಗಳನ್ನು ತಿಳಿಸಲು ಗ್ರಂಥಗಳು ಬೇಕಾಗಬಹುದು. ಆದರೆ ಅವುಗಳನ್ನು ಪವಿತ್ರ ಗ್ರಂಥಗಳೆಂದು ಪರಿಗಣಿಸುವುದಿಲ್ಲ. ಕೆಲವು ವಿಷಯಗಳನ್ನು ತಿಳಿಯಲು ಗ್ರಂಥಗಳೂ ಬೇಕಾಗಿಲ್ಲ. 'ಬೆಂಕಿ ಸುಡುತ್ತದೆ' ಎಂಬುವುದನ್ನು ತಿಳಿಸಲು ಗ್ರಂಥಬೇಕೇ?

ವೇದಕ್ಕೆ ಶ್ರುತಿ ಎಂಬ ಹೆಸರು ಇದೆ. ಸಮಾಧಿ ಸ್ಥಿತಿಯಲ್ಲಿದ್ದ ಋಷಿಗಳಿಗೆ ಇವುಗಳು ಕೇಳಿಸಿದ್ದರಿಂದ ಇವುಗಳು ಶ್ರುತಿಗಳು. ಗುರುಗಳಿಂದ ಶಿಷ್ಯರು ಕೇಳಿಸಿಕೊಂಡು ಕಲಿಯುವುದರಿಂದಲೂ ಇವುಗಳು ಶ್ರುತಿಗಳು. ವೇದಗಳು ಸನಾತನ. ಇವುಗಳನ್ನು ಯಾರೂ ರಚಿಸಿಲ್ಲ. ಪುರುಷರಿಂದ ರಚಿತವಾಗಿಲ್ಲವಾದುದರಿಂದ ವೇದ 'ಅಪೌರುಷೇಯ'ವೆನಿಸುತ್ತದೆ. ಅಗ್ನಿ, ವಾಯು, ಆದಿತ್ಯ, ಆಂಗಿರಸರಿಂದ ವೇದಗಳು ಬಂದವೆಂದು ಹೇಳುತ್ತಾರಲ್ಲ? ಎಂಬ ಪ್ರಶ್ನೆ ಬರಬಹುದು. ಇವರೆಲ್ಲ ಎಂದಿನಿಂದಲೂ ಇದ್ದ ವೇದಗಳನ್ನು ಮತ್ತೆ ಪ್ರಕಾಶಕ್ಕೆ ತಂದರೇ ಹೊರತು ಹೊಸತಾಗಿ ರಚಿಸಲಿಲ್ಲ.

ವೇದಗಳು ನಾಲ್ಕು-ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ. ಮೊದಲು ಈ ವೇದಗಳು ಒಂದೇ ರಾಶಿಯಾಗಿದ್ದವು. ಅವುಗಳನ್ನು ಗುರುತಿಸಿ ಕೃಷ್ಣದ್ವೈಪಾಯನರು ವಿಂಗಡಿಸಿದರು. ಅದಕ್ಕೇ ಅವರನ್ನು ವೇದವ್ಯಾಸರೆಂದರು.

ವೇದಸಾಹಿತ್ಯವನ್ನು ನಾಲ್ಕು ವಿಧವಾಗಿ ವಿಭಜಿಸಲಾಗಿದೆ :- ಸಂಹಿತೆ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತು ಎಂದು. ಮಂತ್ರಭಾಗಕ್ಕೆ ಸಂಹಿತೆ ಎಂದೂ, ಯಜ್ಞವಿಚಾರಗಳನ್ನು ವಿವರಿಸುವ ಭಾಗಕ್ಕೆ ಬ್ರಾಹ್ಮಣವೆಂದೂ, ಬ್ರಾಹ್ಮಣಗಳ ಪರಿಶಿಷ್ಟ ಭಾಗಗಳಾಗಿ ಅರಣ್ಯದಲ್ಲಿ ಬೋಧನೆ, ಅಧ್ಯಯನ ನಡೆಯುವುದರಿಂದ ಮೂರನೆಯ ಭಾಗ ಆರಣ್ಯಕವೆಂದೂ, ವೇದಗಳ ರಹಸ್ಯಗಳನ್ನು ಬೋಧಿಸುವ ಭಾಗ ಉಪನಿಷತ್ತು ಎಂದೂ ಪ್ರಸಿದ್ಧವಾಗಿವೆ.

ಪ್ರತಿಯೊಂದು ವೇದಕ್ಕೂ ಅದರದ್ದೇ ಆದ ಬ್ರಾಹ್ಮಣ, ಆರಣ್ಯಕ ಉಪನಿಷತ್ತುಗಳಿವೆ. ಇಷ್ಟೊಂದು ವಿಸ್ತೃತ ಸಾಹಿತ್ಯದ ಗ್ರಂಥ ಸನಾತನ ಧರ್ಮವನ್ನು ಬಿಟ್ಟರೆ ಇನ್ನಾವ ಧರ್ಮಕ್ಕೂ ಇಲ್ಲ.

**ಋಗ್ವೇದ :**

ಋಕ್ ಎಂಬ ಶಬ್ದ 'ಋಚಸ್ತುತೌ' ಎಂಬ ಧಾತುವಿನಿಂದ ಬಂದಿದೆ. ಸ್ತುತಿಸುವುದು, ವರ್ಣಿಸುವುದು ಎಂದದರ ಅರ್ಥ. ಋಕ್+ವೇದವೇ ಋಗ್ವೇದ. ಋಚಂತಿಸ್ತುವಂತಿ ಪದಾರ್ಥಾನಾಂ ಗುಣಕರ್ಮ ಸ್ವಭಾವಾನ್ ಅನಯಾ ನಾ ಋಕ್' ಎಂದು ಅದರ ಅರ್ಥವನ್ನು ವಿವರಿಸುತ್ತಾರೆ ಎಂದರೆ ಪದಾರ್ಥಗಳ ಗುಣ, ಕರ್ಮ, ಸ್ವಭಾವಗಳನ್ನು ಯಾವುದರ ಮೂಲಕ ಸ್ತುತಿ ಮಾಡಲಾಗುತ್ತದೋ ಅದೇ ಋಕ್ ಎಂದರ್ಥ.

ವೇದಗಳಿರುವುದು ಸಂಸ್ಕೃತ ಭಾಷೆಯಲ್ಲಿ. ಆದರೆ ಅದನ್ನು ವೈದಿಕ ಸಂಸ್ಕೃತವೆನ್ನುತ್ತಾರೆ. ಲೌಕಿಕ ಸಂಸ್ಕೃತಕ್ಕಿಂತ ಇದು ಭಿನ್ನ. ಲೌಕಿಕ ಸಂಸ್ಕೃತವನ್ನು ಕಲಿತವರಿಗೆಲ್ಲ ವೇದಮಂತ್ರಗಳು ಅರ್ಥವಾಗಲಾರವು. ವೈದಿಕ ಸಂಸ್ಕೃತ ಸ್ವರ ಪ್ರಧಾನವಾದುದು. ಲೌಕಿಕಕ್ಕೂ ಸ್ವರಗಳಿದ್ದರೂ ಅವುಗಳು ರೂಢಿಯಲ್ಲಿಲ್ಲ. ಸ್ವರಗಳು ಮೂರು-ಉದಾತ್ತ, ಅನುದಾತ್ತ ಮತ್ತು ಸ್ವರಿತ. ಮೇಲಿನ ಸ್ವರವೇ ಉದಾತ್ತ. ಕೆಳಗಿನ ಸ್ವರವೇ ಅನುದಾತ್ತ. ಇವೆರಡರ ಮಿಶ್ರಣ ಸ್ವರಿತ. ಈ ಸ್ವರಗಳ ವ್ಯತ್ಯಾಸದಿಂದ ಅರ್ಥಗಳೂ ವ್ಯತ್ಯಸ್ತಗೊಳ್ಳುತ್ತವೆ. ಉದಾ: ಮಾ ಎಂಬುದೊಂದು ಶಬ್ದ. ಇದಕ್ಕೆ ನನ್ನನ್ನು ಮತ್ತು ಬೇಡ ಎಂಬೆರಡು ಅರ್ಥಗಳಿವೆ. ಹಾಗಾದರೆ ಈ ಅರ್ಥಗಳನ್ನು ನಿರ್ಣಯಿಸುವುದು ಹೇಗೆ? ಮಾ ಎಂಬುವುದನ್ನು ಅನುದಾತ್ತವಾಗಿ ('ಮಾ' ಎಂದು) ಉಚ್ಚರಿಸಿದರೆ ನನ್ನನ್ನು ಎಂದರ್ಥವಾಗುತ್ತದೆ. ಅದನ್ನೇ ಉದಾತ್ತವಾಗಿ ('ಮಾ' ಎಂದು) ಉಚ್ಚರಿಸಿದರೆ ಬೇಡ ಎಂದರ್ಥವಾಗುತ್ತದೆ. ಆದುದರಿಂದ ವೇದಗಳಲ್ಲಿ ಸ್ವರಗಳಿಗೆ ಮಹತ್ವ.

(ತುಳು ಭಾಷೆಯಲ್ಲೂ ಕ್ವಚಿತ್ತಾಗಿ ಉದಾತ್ತ, ಅನುದಾತ್ತಗಳ ಬಳಕೆಯಾಗುತ್ತದೆ. ಉದಾ: ಪೋಪೆ ಎಂಬುವುದನ್ನೇ ತೆಗೆದುಕೊಳ್ಳೋಣ. ಪೋಪೆ ಎಂದು ಉದಾತ್ತವಾಗಿ ಉಚ್ಚರಿಸುವಾಗ 'ಹೋಗುತ್ತಾನೆ' ಎಂದರ್ಥವಾಗುತ್ತದೆ. ಅದನ್ನೇ ಅನುದಾತ್ತವಾಗಿ ಪೋಪೆ ಎಂದುಚ್ಚರಿಸಿದರೆ 'ಹೋಗುತ್ತೇನೆ' ಎಂದರ್ಥವಾಗುತ್ತದೆ.)

ಋಗ್ವೇದವನ್ನು ಎರಡು ತೆರನಾಗಿ ವಿಭಜಿಸಿದ್ದಾರೆ-ಅಷ್ಟಕ ಮತ್ತು ಮಂಡಲವೆಂದು. ಅಷ್ಟಕಗಳು ಎಂಟು. ಪ್ರತಿಯೊಂದು ಅಷ್ಟಕದಲ್ಲಿ ಎಂಟು ಅಧ್ಯಾಯಗಳಿವೆ. ಹೀಗೆ ಋಗ್ವೇದದಲ್ಲಿ 64 ಅಧ್ಯಾಯಗಳಿವೆ. ಮಂಡಲಗಳು ಹತ್ತು. ಇವುಗಳು 85 ಅನುವಾಕಗಳಲ್ಲಿ ವಿಭಕ್ತವಾಗಿವೆ. ಅಷ್ಟಕಗಳಲ್ಲಿ ಅಥವಾ ಮಂಡಲಗಳಲ್ಲಿ 1028 ಸೂಕ್ತಗಳಿವೆ ಮತ್ತು 10552 ಮಂತ್ರಗಳಿವೆ.

ಋಗ್ವೇದಕ್ಕೆ ಐತರೇಯ ಮತ್ತು ಕೌಶೀತಕಿ ಎಂಬೆರಡು ಬ್ರಾಹ್ಮಣಗಳಿವೆ. ಕೌಶೀತಕಿಗೆ ಶಾಂಖಾಯನ ಎಂಬ ಹೆಸರೂ ಇದೆ. ಬ್ರಾಹ್ಮಣವೆಂದರೆ ವಿಧಾಯಕವಾಕ್ಯ, ಯಜ್ಞಗಳ ವಿಧಿ, ವಿಧಾನಗಳನ್ನು ವಿವರಿಸುವುದೇ ಬ್ರಾಹ್ಮಣ. ಸಂಹಿತೆಗಳು ಹೆಚ್ಚಿನ ಮಟ್ಟಿಗೆ ಪದ್ಯರೂಪದಲ್ಲಿರುತ್ತವೆ. ಆದರೆ ಬ್ರಾಹ್ಮಣಗಳು ಗದ್ಯ ರೂಪದಲ್ಲಿವೆ. ಮಹೀದಾಸ ಐತರೇಯನಿಂದ ಐತರೇಯ ಬ್ರಾಹ್ಮಣ ದೃಷ್ಟವಾಯಿತೆನ್ನುತ್ತಾರೆ. ಇತರಾ ಎನ್ನುವವಳ ಮಗನೇ ಐತರೇಯ ಎಂಬ ಐತಿಹ್ಯವಿದೆ. ಹರಿಶ್ಚಂದ್ರ ಶುನಃಶೇಫರಪಾಖ್ಯಾನವೂ ಇದೇ ಬ್ರಾಹ್ಮಣದಲ್ಲಿದೆ.

ಋಗ್ವೇದದ ಇನ್ನೊಂದು ಬ್ರಾಹ್ಮಣ ಕೌಶೀತಕಿ. ಇದನ್ನೇ ಶಾಂಖಾಯನವೆಂದು ಕೆಲವರೂ, ಅಲ್ಲವೆಂದು ಕೆಲವರೂ ವಾದಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ಆಶ್ವಲಾಯನಾಚಾರ್ಯರು ತರ್ಪಣ ಪ್ರಕರಣದಲ್ಲಿ ಶಾಂಖಾಯನರನ್ನು ಮತ್ತು ಕೌಶೀತಕರನ್ನು ಬೇರೆಬೇರೆಯಾಗಿ ಹೆಸರಿಸಿದ್ದು. ಐತರೇಯದಲ್ಲಿ 40 ಅಧ್ಯಾಯಗಳಿದ್ದರೆ ಇದರಲ್ಲಿ 30 ಅಧ್ಯಾಯಗಳಿವೆ. ಇದರಲ್ಲೇ ಅಗ್ನ್ಯಾಧಾನ, ಅಗ್ನಿಹೋತ್ರ, ದರ್ಶಪೂರ್ಣಮಾಸ, ಚಾತುರ್ಮಾಸ್ಯ, ಸೋಮಯಾಗಗಳ ವರ್ಣನೆಯಿದೆ. ಈ ಬ್ರಾಹ್ಮಣಗಳ ಕಾಲದಲ್ಲಿ ವಿಷ್ಣು ಹೆಚ್ಚೋ, ರುದ್ರ ಹೆಚ್ಚೋ ಎಂಬ ವಿವಾದ ನಡೆಯುತ್ತಿತ್ತೆಂದು ತಿಳಿದು ಬರುತ್ತದೆ.

ಋಗ್ವೇದಕ್ಕೆ ಐತರೇಯೋಪನಿಷತ್ತು ಎಂಬ ಒಂದೇ ಉಪನಿಷತ್ತು ದೊರೆತಿದೆ. ಇದೊಂದು ಪುಟ್ಟ ಉಪನಿಷತ್ತು. ಇದರಲ್ಲಿ ಮೂರು ಅಧ್ಯಾಯಗಳಿವೆ.

(ಮುಂದುವರಿಯುವುದು)

## ಚಿಂತನ

''ಏನೇ ಸುಧಾ ಬಹಳ ಸಪ್ಪಗಿದ್ದಿಯಾ?'' ಗೆಳತಿಯ ಪ್ರಶ್ನೆ. ಸುಧಾಳ ಮುಖಭಾವ ಕಂಡೇ ಸ್ನೇಹಿತೆ ಈ ಮಾತನ್ನು ಆಡಿದ್ದಾಳೆ. ಅಧ್ಯಾಪಕರ ಮುಖವನ್ನು ಪರಿಶೀಲಿಸಿ ವಿದ್ಯಾರ್ಥಿಗಳು ತಮ್ಮ ಸಮಸ್ಯೆ ಅವರಲ್ಲಿ ಕೇಳುವುದು, ವಿದ್ಯಾರ್ಥಿಗಳ ಮುಖನೋಡಿ ಅಧ್ಯಾಪಕರು ತಪಾಸಣಾ ಅಧಿಕಾರಿಗಳು ವಿದ್ಯಾರ್ಥಿಯನ್ನು ಪ್ರಶ್ನಿಸುವುದು; ತಂದೆ-ತಾಯಿಯರ ಮುಖದ ಪ್ರಸನ್ನತೆ ಕಂಡು ಮಕ್ಕಳು ತಮ್ಮ ಬೇಡಿಕೆ ಈಡೇರಿಕೆಗಾಗಿ ಪ್ರಯತ್ನಿಸುವುದು, ಗ್ರಾಹಕನ ಮುಖನೋಡಿ ವ್ಯಾಪಾರಿ ಅವನೊಡನೆ ವ್ಯಾಪಾರ ಕುದುರಿಸುವುದು ಮೊದಲಾದವುಗಳು ದಿನನಿತ್ಯ ವ್ಯವಹಾರದಲ್ಲಿ ನಡೆಯುತ್ತಿರುತ್ತವೆ.

ಮೇಲಿನ ಎಲ್ಲಾ ಘಟನೆಗಳಲ್ಲೂ ಮುಖದ ಭಾವನೆಗಳನ್ನು ಅರ್ಥೈಸಿಕೊಳ್ಳುವುದು ಪ್ರಮುಖ ಕೆಲಸ. ಇದನ್ನೇ (Face Reading) ಎಂದು ಹೇಳಲಾಗುತ್ತದೆ. ಮುಖದ ಭಾವನೆ ಅರ್ಥ ಮಾಡಿಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ. ಹಾಗೆಯೇ ಕೆಲವರು ಈ ವಿಷಯದಲ್ಲಿ ಹೆಚ್ಚು ಪಳಗಿರುತ್ತಾರೆ. ಯಾವಾತನು ಈ ಕಲೆಯನ್ನು ತಿಳಿದು ಇತರರೊಂದಿಗೆ ವ್ಯವಹಾರ ನಡೆಸುತ್ತಾನೋ ಆತನು ಜೀವನದಲ್ಲಿ ಯಶಸ್ಸನ್ನು ಸಾಧಿಸುತ್ತಾನೆ. ಏಕೆಂದರೆ ಆತನ ಯಾವುದೇ ಕೆಲಸಗಳು ತೊಂದರೆ ಇಲ್ಲದೆ ನಡೆಯುತ್ತವೆ. ಅಂತಹ ಸಕಾಲದಲ್ಲಿ ಆತ ಇತರರೊಂದಿಗೆ ವ್ಯವಹಾರ ಕುದುರಿಸಿಕೊಳ್ಳುತ್ತಾನೆ.

''ಯಾರ ಮುಖದರ್ಶನ ಈ ದಿನ ಬೆಳಿಗ್ಗೆ ಮಾಡಿದ್ದೆನೋ, ಇಂದಿನ ಎಲ್ಲಾ ಕೆಲಸ ಹಾಳಾಯಿತು'' ಎಂದು ಹೇಳುವುದನ್ನೂ ಕೇಳಿದ್ದೇವೆ. ಕೇವಲ ಮುಖದರ್ಶನದಿಂದ ಜೀವನದಲ್ಲಿ ಒಳಿತು ಕೆಡುಕುಗಳಾಗುತ್ತವೆ ಎಂದು ಹೇಳುವುದು ಮೂಢನಂಬಿಕೆಯಲ್ಲದೇ ಬೇರಿನ್ನೇನೂ ಅಲ್ಲ.

ಮನಸ್ಸಿನ ಪ್ರಫುಲ್ಲತೆ - ಪ್ರಸನ್ನತೆ - ಬೇಸರ-ದುಃಖ-ಚಿಂತೆ ಮೊದಲಾದ ಭಾವನೆಗಳು ಮಾನವನ ಮುಖದ ಮೇಲೆ ಪರಿಣಾಮ ಬೀರುತ್ತವೆ. ಆದ್ದರಿಂದ ಇತರರೊಂದಿಗೆ ವ್ಯವಹಾರ ಮಾಡುವಾಗ ಅವರ ಮನದ ಕನ್ನಡಿಯಾದ ಮುಖವನ್ನು ನೋಡಿ ಅವರಲ್ಲಿ ಮಾತುಕತೆ ಮುಂದುವರಿಸಿದಲ್ಲಿ ನಮ್ಮ ಯಶಸ್ಸನ್ನು ನಾವು ಕಾಣಬಹುದು.

## ಹೊಸ ಬೆಳಕು

**ನಲ್ನುಡಿ :**

**ತಚ್ಚಕ್ಷುರ್ ದೇವಹಿತಂ ಪುರಸ್ತಾಚ್ಛುಕ್ರಮುಚ್ಚರಸ್ ಪಶ್ಯೇಮ ಶರದಶ್ಯತಂ ।**
**ಜೀವೇಮ ಶರದಶ್ಯತಂ**

ಅಂದರೆ ಪೂರ್ವದಿಕ್ಕಿಗೆ ಗೋಲಾಕಾರವಾಗಿ ಉದಯಿಸಿ ಕಣ್ಣುಗಳಂಥ ಮಂಗಳಕರವಾದುವುಗಳ ಯೋಗಕ್ಷೇಮವನ್ನು ನೋಡಿಕೊಳ್ಳುವ ಸೂರ್ಯನನ್ನು, ನಾವು ನೂರು ವರ್ಷ ನೋಡುವಂತಾಗಲಿ ಹಾಗೂ ಅವನನ್ನು ಆರಾಧಿಸುವಂತಾಗಲಿ, ಹೀಗೆ ನಾವು ಶತಾಯುಷಿಗಳಾಗಿರಲಿ.

**ಪುಸ್ತಕ ಪರಿಚಯ :**

**ಸಮಯ ಸಂದರ್ಭ**

**ಲೇಖಕರು : ವೈ ಅವನೀಂದ್ರನಾಥ ರಾವ್.**

ದೆಹಲಿಯಂಥ ಮಹಾನಗರದಲ್ಲಿ ಕೇಂದ್ರ ಸರಕಾರದ ಸಂಸ್ಕೃತಿ ಸಚಿವಾಲಯದಲ್ಲಿ ಗ್ರಂಥಪಾಲಕರಾಗಿ ಕೆಲಸ ಮಾಡುತ್ತಾ ಕನ್ನಡದ ಬೆಳವಣಿಗೆಗೂ ಕೊಡುಗೆ ಸಲ್ಲಿಸುತ್ತಿರುವ ಶ್ರೀ ವೈ. ಅವನೀಂದ್ರನಾಥ ರಾವ್ ಅವರು ತನ್ನ 10 ವರ್ಷಗಳ ಅವಧಿಯಲ್ಲಿ ಬರೆದ ಬಿಡಿ ಲೇಖನಗಳ ಸಂಕಲನ-'ಸಮಯ ಸಂದರ್ಭ'. ಈ ಲೇಖನಗಳು ಕನ್ನಡದ ಜನಪ್ರಿಯ ಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟವಾಗಿವೆ. ವಿವಿಧ ಸಂದರ್ಭಗಳಲ್ಲಿ ಬರೆದ ಈ ಲೇಖನಗಳು ವಿಷಯ ವೈವಿಧ್ಯತೆಯಿಂದ ಕೂಡಿವೆ. ಇಲ್ಲಿ ಭಾಗ - 1 ರಲ್ಲಿ ಮುಪ್ಪು : ಕೊನೆಕಾಲದ ಪರಿಹಾರನ್ವೇಷಣೆ, ಮಾಹಿತಿ ಮತ್ತು ಅದರ ಇತ್ತೀಚಿಗಿನ ವಿದ್ಯಮಾನಗಳು, ಅನ್ನದೇವರ ಮುಂದೆ ಇನ್ನು ಬೇರೆ ದೇವರು ಇಲ್ಲ, ಇಂಟರ್‌ನೆಟ್ ಯುಗದಲ್ಲಿ ಪುಸ್ತಕದ ಜಾದು- ಹೀಗೆ 15 ಲೇಖನಗಳು ವಿವಿಧ ಸಂಗತಿಗಳನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುತ್ತವೆ. ಭಾಗ -2 ರಲ್ಲಿ ವಿಶ್ವ ವ್ಯವಸ್ಥೆಯ ದಾರ್ಶನಿಕ ಟಾಗೋರ್, ರೇಡಿಯೋ ಜನಕನ ನೆನಪು, ಜೆ.ಪಿ. : ದೇಶಪ್ರೇಮದ ರೋಚಕ ಅಧ್ಯಾಯ - ಹೀಗೆ 7 ಲೇಖನಗಳು ವ್ಯಕ್ತಿ ಚಿತ್ರಗಳನ್ನು ಆಕರ್ಷಕವಾಗಿ ನೀಡುತ್ತವೆ.

'ಇಂಟರ್‌ನೆಟ್ ಯುಗದಲ್ಲಿ ಪುಸ್ತಕದ ಜಾದೂ' ಎಂಬ ಲೇಖನದ ''ಪುಸ್ತಕ ಸಂಸ್ಕೃತಿ ಬೆಳೆಯಲು ಕಾರ್ಯಕ್ರಮ ರೂಪಿಸಬೇಕಾಗಿದೆ. ಈ ಕಾರ್ಯಕ್ರಮ ಹೆತ್ತವರಿಂದಲೇ, ಮುಖ್ಯವಾಗಿ ತಾಯಂದಿರಿಂದಲೇ ಆಗಬೇಕು ಎಂಬುದು ಈಚೆಗೆ ನಡೆದ ಅನೇಕ ವಿಚಾರ ಸಂಕಿರಣಗಳಲ್ಲಿ ವ್ಯಕ್ತವಾಗಿದೆ. ಪತ್ರಿಕೆಯಲ್ಲಿ ಬಿತ್ತರಗೊಂಡ ಆಸಕ್ತಿಯ ವಿಷಯವನ್ನು ತಾಯಿಯೊಬ್ಬಳು ಗಟ್ಟಿಯಾಗಿ ಓದುವುದರ ಮೂಲಕ ಮಕ್ಕಳ ಮನಸ್ಸನ್ನು ಅತ್ತ ಸೆಳೆಯಬಹುದು. ಓದುವ ಆಸಕ್ತಿಯನ್ನು ಕುದುರಿಸುವ ಕೃತಿಗಳನ್ನು ಹೆತ್ತವರೇ ಖರೀದಿಸಿ ಓದುವ ಪ್ರವೃತ್ತಿಯಿಂದ ಮಕ್ಕಳಿಗೆ ಸೂಕ್ತ ವಾತಾವರಣ ಕಲ್ಪಿಸಬಹುದು'' ಎಂಬ ಸಾಲುಗಳು ತಂತ್ರಜ್ಞಾನ ಮತ್ತು ಮಾಹಿತಿ ಕ್ಷೇತ್ರದಲ್ಲಿ ಆಗುತ್ತಿರುವ ಕ್ಷಿಪ್ರಕ್ರಾಂತಿ ಸಂದರ್ಭದಲ್ಲಿ ಪುಸ್ತಕ ಸಂಸ್ಕೃತಿ ಉಳಿಸಿ ಬೆಳೆಸಲು ಮಹತ್ವದ ಪರಿಹಾರೋಪಾಯವನ್ನು ಸೂಚಿಸುತ್ತವೆ.

ಸಾಹಿತಿ ಡಾ। ಪುರುಷೋತ್ತಮ ಬಿಳಿಮಲೆಯವರು ಈ ಕೃತಿಗೆ ಮುನ್ನುಡಿಯನ್ನು ಬರೆದಿದ್ದಾರೆ. ಅವರು ಹೇಳುವಂತೆ ''ಇಲ್ಲಿನ ಬರಹಗಳು ಹೆಚ್ಚು ವಿವಾದಕ್ಕೆ ಒಳಪಡದ ಎಚ್ಚರವನ್ನು ಅವನೀಂದ್ರನಾಥ್ ಅವರು ಕಾಯ್ದುಕೊಂಡು ಬಂದಿದ್ದಾರೆ. ಆವೇಶ, ಉದ್ವಿಗ್ನತೆಗಳಿಲ್ಲದ ಸಂಯಮದ ಬರಹದ ಶೈಲಿಯೊಂದನ್ನು ಅವರು ಸಿದ್ಧಿಸಿಕೊಂಡಿದ್ದಾರೆ''. 'ಧಾರಿಣಿ' ಬೆಂಗಳೂರು 'ಸಮಯ ಸಂದರ್ಭ'ವನ್ನು ಅಚ್ಚುಕಟ್ಟಾಗಿ ಪ್ರಕಟಿಸಿದೆ.

**- ವೈ. ಮೋಹನರಾವ್**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ.